ನನಗೆ ಅವರ ಜೊತೆ ಮಾತನಾಡಲು ಇನ್ನೂ ಆಗಿಲ್ಲ. ದಯಮಾಡಿ ತಾವು ಅದನ್ನು ಅರ್ಥಮಾಡಿಕೊಳ್ಳುತ್ತೀರೆಂದು ಭಾವಿಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ : (ಬೈಲಹೊಂಗಲ) ವಿಷಯ ಮಲಪ್ರಭಾ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಬಗ್ಗೆ : ಇವತ್ತಿನ ದಿನ ಬೆಳಗಾಂ ಜಿಲ್ಲೆಯ ಮಲಪ್ರಭಾ ಸಕ್ಕರೆ ಕಾರ್ಖಾನೆಯ ಸದಸ್ಯರುಗಳು ಕೂಡಲೇ ಚುನಾವಣೆಯನ್ನು ಮಾಡಬೇಕೆಂದು ಸರದಿಯ ಉಪವಾಸ ಮಾಡುತ್ತಿದ್ದಾರೆ. ಕೆಲವು ಜನರ ಸ್ಥಿತಿ ಈಗಾಗಲೇ ಚಿಂತಾಜನಕವಾಗಿದೆ. ಆದುದರಿಂದ ಸರ್ಕಾರದವರು ಯಾವಾಗ ಅಲ್ಲಿ ಚುನಾವಣೆಯನ್ನು ನಡೆಸುತ್ತಾರೆ. ಎಂಬುದನ್ನು ಹೇಳಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಈ ಹಿಂದೆ ಮಲಪ್ರಭಾ ಸಕ್ಕರೆ ಕಾರ್ಖಾನೆಯ ಚುನಾವಣೆಯನ್ನು ಬೇಗ ಮಾಡುತ್ತೇವೆಂದು ಸರ್ಕಾರದವರು ಇದೇ ವಿಧಾನ ಸಭೆಯಲ್ಲಿ ಈ ಹಿಂದೆ 2 ಸಾರಿ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಆಶ್ವಾಸನೆಯ ಪ್ರಕಾರ ಇದುವರೆಗೂ ಚುನಾವಣೆಯನ್ನು ಮಾಡಲಿಲ್ಲ.. ಇದರಿಂದಾಗಿ ಅಲ್ಲಿ ಷೇರು ಹೋಲ್ಡರ್ಸ್ ಉಪವಾಸ ಕೂತಿದ್ದಾರೆ. ಅವರಲ್ಲಿ ಕೆಲವು ಜನರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಆದುದರಿಂದ ಆ ಸಕ್ಕರೆ ಕಾರ್ಖಾನೆಗೆ ಎಷ್ಟು ದಿವಸದಲ್ಲಿ ಚುನಾವಣೆಯನ್ನು ಮಾಡುತ್ತೀರೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದವರನ್ನು ಕೇಳಿಬಯಸುತ್ತೇನೆ.

ಶ್ರೀ ಎಸ್.ಆರ್. ಮೋರೆ (ಸಹಕಾರ ಖಾತೆ ಸಚಿವರು) : ಆದಷ್ಟು ಬೇಗ ಚುನಾವಣೆಯನ್ನು ಮಾಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಆದರೆ ಈಗ ಮಳೆಗಾಲ ಆಗಿರುವುದರಿಂದ ಸಾಧ್ಯವಾಗುತ್ತಿಲ್ಲ. ಮಳೆಗಾಲ ಮುಗಿದ ಕೂಡಲೇ ಚುನಾವಣೆಯನ್ನು ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ವಿಷಯ : ಫೇರ್‌ಗ್ರೋಥ್ ಫೈನಾನ್ಸಿಯಲ್ ಸರ್ವೀಸಸ್ ಕಂಪೆನಿಯ ಷೇರುಗಳನ್ನು ಪಡೆದಿರುವ ಸಚಿವರು ರಾಜೀನಾಮೆ ನೀಡುವ ಬಗ್ಗೆ ಮಾನ್ಯ ಉಪ ಸಭಾಪತಿಯವರೆ, ನಾನು ಅರ್ಧಕ್ಕೇ ನಿಲ್ಲಿಸಿದ್ದೆ. ಈ ದೇಶದಲ್ಲಿ ನಡೆದಿರಬಹುದಾದ ಸೆಕ್ಯುರಿಟೀಸ್ ಸ್ಕ್ಯಾಂಗೆ ಸಂಬಂಧಪಟ್ಟಿರುವ ಹೇಳುವುದಾದರೆ, ಕೇಂದ್ರದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಅವರ ಮಂತ್ರಿಮಂಡಲದಲ್ಲಿರಬಹುದಾದ ಎಲ್ಲ ಸದಸ್ಯರಿಗೂ ಎಚ್ಚರಿಕೆಯನ್ನು ಕೊಟ್ಟು ಯಾರ್ಯಾರು ಯಾವ ಯಾವ ಕಂಪೆನಿಗಳಲ್ಲಿ ಎಷ್ಟೆಷ್ಟು ಇನ್‌ವೆಸ್ಟ್‌ಮೆಂಟ್ ಮಾಡಿದ್ದೀರೆಂಬ ವಿವರಗಳನ್ನು ಕೊಡಬೇಕೆಂದು ಕೇಳಿ ಅದರ ಪ್ರಕಾರ ವಿವರಗಳನ್ನೂ ಕೂಡ ಅವರು ಪಡೆದಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಒಬ್ಬ ಮಂತ್ರಿಯೂ ಕೂಡ ತಮ್ಮ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅವರು ರಾಜೀನಾಮೆಯನ್ನು ಕೊಡಲು ಕಾರಣವೆಂದರೆ ಬೆಂಗಳೂರಿನಲ್ಲಿರಬಹುದಾದ ಒಂದು ಕಂಪನಿಯಲ್ಲಿ ಅವರು ತಮ್ಮ ಷೇರು ಬಂಡವಾಳವನ್ನು ಹೂಡಿಸಿದ್ದರಿಂದ, ಹಾಗೂ ಈ ಸೆಕ್ಯುರಿಟೀಸ್ ಸ್ಕ್ಯಾಂನಲ್ಲಿ ಇನ್‌ವಾಲ್ವ್ ಆಗಿರುವುದರಿಂದ ಅವರು ಮಾರಲ್ ರೆಸ್ಪಾನ್ಸಿಬಿಲಿಟಿಯಿಂದ ತಮ್ಮ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಇವತ್ತು ಫೇರ್‌ಗ್ರೋತ್ ಫೈನಾನ್ಷಿಯಲ್ ಸರ್ವೀಸಸ್ ಎಂದು ಬೆಂಗಳೂರಿನಲ್ಲಿರಬಹುದಾದ ಒಂದು ಕಂಪನಿಯಲ್ಲಿ ಬಹಳ ಜನ ಮಂತ್ರಿಗಳು ಮತ್ತು ಜವಾಬ್ದಾರಿ ಸಾಧನದಲ್ಲಿರಬಹುದಾದ ಅಧಿಕಾರಿಗಳೂ ಕೂಡ ಈ ಕಂಪನಿಯಲ್ಲಿ ತಮ್ಮ ಹಣವನ್ನು ಹೂಡಿಸಿದ್ದಾರೆ. 300–400 ರೂ. ಇದ್ದಂಥ ಕೇರನ್ನು 510 ರೂಗಳಿಗೆ ಕೊಂಡುಕೊಂಡಿದ್ದಾರೆ. ಇವರಿಗೂ ಮತ್ತು ಆ ಕಂಪನಿಯವರಿಗೂ ಒಂದುರೀತಿಯ ಹೊಂದಾಣಿಕೆ ಇದೆ ಎಂದು ಇವತ್ತು ಅತಿಯಾಗಿ ಪ್ರಚಾರವಾಗಿದೆ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಪ್ರಧಾನ ಮಂತ್ರಿಗಳು ಹಾಕಿಕೊಟ್ಟಿರಬಹುದಾದ ನೀತಿಯನ್ನು ಅನುಸರಿಸಿ ನೀವು ಕೂಡ ನಿಮ್ಮ ಮಂತ್ರಿಮಂಡಲದ ಸಹೋದ್ಯೋಗಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿದ್ದೀರಾ ? ಯಾವ ಯಾವ ಮಂತ್ರಿಗಳು ತಮ್ಮ ಹಣವನ್ನು ಈ ಕಂಪನಿಯಲ್ಲಲ್ಲಿ ಇನ್‌ವೆಸ್ಟ್ ಮಾಡಿದ್ದಾರೆಂಬುದನ್ನು ಧಯವಿಟ್ಟು ತಿಳಿಸಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆಯವರೇ, ಪತ್ರಿಕೆಯಲ್ಲಿ ನಾನು ಓದಿರುವಂತೆ ಫೇರ್ ಗ್ರೋತ್ ಫೈನಾನ್ಷಿಯಲ್ ಸರ್ವೀಸಸ್ ಕಂಪನಿ ಎಂಥಲೋ ಏನೋ ಒಂದು

ಕಂಪನಿ ಬೆಂಗಳೂರಿನಲ್ಲಿದೆ. ಇದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಷೇರ್ಸ್ ಸ್ಕ್ಯಾಂ ಎಂಬುದು ಸಂಪೂರ್ಣವಾಗಿ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು. ಕೇಂದ್ರ ಸರ್ಕಾರಕ್ಕೆ ಈ ಅಧಿಕಾರ ಇದೆ. ತಾವು ಅವರಿಗೆ ದಯವಿಟ್ಟು ಪತ್ರ ಬರೆಯಿರಿ. ಯಾವು ಯಾವುವು ಇವೆ, ಎಲ್ಲೆಲ್ಲಿವೆ ಎಂಬುದನ್ನು ತಿಳಿಸುವಂತೆ ಕೇಳಿ ಬರೆಯಿರಿ. ಈ ಕರ್ನಾಟಕದ ಮಂತ್ರಿಮಂಡಲದಲ್ಲಿ ಯಾರಾದರೂ ಇದ್ದರೆ, ಅಧಿಕಾರಿಗಳಲ್ಲಿ ಯಾರಾದರೂ ಇದ್ದರೆ ಅವರ ಹತ್ತಿರ ಒಂದು ಪಟ್ಟಿ ಇರುತ್ತದೆ. ಅವರಿಗೆ ಅದು ಸಿಕ್ಕುತ್ತದೆ. They have got their own channels as to how to get all those things investigated. I cannot take the place of those persons who have got those basic powers to investigate into the matter.

ಅದನ್ನೆಲ್ಲಾ ಅವರು ಮಾಡಿಕೊಳ್ಳುತ್ತಾರೆ. ಯಾರ್ಯಾರೋ ಹೇಳಿದ್ದನ್ನು ನೀವು ಇಲ್ಲಿ ತಂದು ನಮ್ಮನ್ನು ಕೇಳಿದರೆ ಹೇಗಾಗುತ್ತದೆ? ಅದು ನಮಗೆ ಬರುವುದಿಲ್ಲ. ಇದು ಅವರಿಗೆ ಸಂಬಂಧಪಟ್ಟ ವಿಚಾರ. How can I partake the nature of that kind of investigation ? I cannot do that job. How can I say that ? ಇದು ನಮಗೆ ಬರುವುದಿಲ್ಲ. ದಯವಿಟ್ಟು ತಾವು ಅವರಿಗೆ ಪತ್ರ ಬರೆದು ಕೇಳಿ. ಇಲ್ಲಿ ಯಾರಾದರೂ ಇದ್ದರೆ ಅದನ್ನು ಅವರು ನೋಡಿಕೊಳ್ಳುತ್ತಾರೆ. ನಮಗೆ ಸಂಬಂಧ ಇಲ್ಲದಿರುವುದನ್ನು ಇಲ್ಲಿ ಏತಕ್ಕೆ ತರುತ್ತೀರಿ ?

ಶ್ರೀ ಸಿ. ಭೈರೇಗೌಡ : ಇದ್ದರೆ ಇದ್ದಾರೆಂದು ಹೇಳಿ, ಇಲ್ಲದಿದ್ದರೆ ಇಲ್ಲ ಎಂದು ಹೇಳಿ.

ಶ್ರೀ ಎಸ್. ಬಂಗಾರಪ್ಪ : ನಾನು ಹೇಗೆ ಹೇಳಲಿ ?

ಶ್ರೀ ಸಿ. ಭೈರೇಗೌಡ : ಮಾನ್ಯ ಪ್ರಧಾನ ಮಂತ್ರಿಗಳು ಯಾವರೀತಿ ತಮ್ಮ ಮಂತ್ರಿಮಂಡಲದ ಸಹೋದ್ಯೋಗಿಗಳನ್ನು ಕೇಳಿದ್ದಾರೋ ಅದೇರೀತಿ ನೀವು ಕೇಳಬೇಕು. ಇದನ್ನು ರಾಜ್ಯದ ಜನತೆ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ.

ಶ್ರೀ ಎಸ್. ಬಂಗಾರಪ್ಪ : ಅವರು ಮಂತ್ರಿಮಂಡಲದ ಸದಸ್ಯರು ಇರಬಹುದು, ಶಾಸನ ಸಭಾ ಸದಸ್ಯರು ಇರಬಹುದು. ನಾಳೆ ನೀವೇ ಇರಬಹುದು, ನಾವೇ ಇರಬಹುದು, ಅಥವಾ ಮತ್ತೊಬ್ಬರು ಇರಬಹುದು; ನಮಗೆ ಸಂಬಂಧಪಡದೇ ಇರುವುದನ್ನು ಕೇಳಿದರೆ ನಾವು ಹೇಗೆ ಹೇಳುವುದಕ್ಕಾಗುತ್ತದೆ? ಇದು ನಮಗೆ ಸಂಬಂಧಪಡುವುದಿಲ್ಲ. ನೀವು ಕೇಂದ್ರ ಸರ್ಕಾರದವರಿಗೆ ಹೇಳಿದರೆ, ಅವರು ನೋಡಿಕೊಳ್ಳುತ್ತಾರೆ.

ಚೇರ್ಮನ್ : ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದ್ದೇನೆ.

(ಸದನವು ರಾತ್ರಿ 7.34 ಗಂಟೆಗೆ ಮುಕ್ತಾಯವಾಗಿ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು.)

(+ ಈ ಬೆಸ್ಟ್ ಮಾನ್ಯ ಸದಸ್ಯರು/ಮುಖ್ಯಮಂತ್ರಿಗಳು/ಮಂತ್ರಿಗಳ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಅನುಬಂಧ–I

ಕರ್ನಾಟಕ ವಿಧಾನಸಭೆ

ಒಭತ್ತನೆಯ ವಿಧಾನಸಭೆ

(ಏಳನೆಯ ಅಧಿವೇಶನ)

(ಮುಂದುವರಿದ ಉಪವೇಶನಗಳು)

(1992ರ ವಿಧಾನ ಸಭಾ ವಿಧೇಯಕ ಸಂಖ್ಯೆ 23)

ಕರ್ನಾಟಕ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1992